**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.**124/2026**

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀಮತಿ ಸುಜಾತ | ಸಿ.ಡಬ್ಲ್ಯು–9 |
| ಗಂಡನ ಹೆಸರು | ಪರಮೇಶ್ವರಪ್ಪ | ಪಿ .ಡಬ್ಲ್ಯೂ–6 |
| ವಯಸ್ಸು | 62 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ನಿವೃತ್ತ ಪಿ ಎಸ್ ಐ, | ದಿನಾಂಕಃ |
| ವಾಸಃ | ಆನಂದಪುರ | 06.07.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಾನು ಸಾಗರ ಪೇಟೆ ಪೊಲೀಸ್ ಠಾಣೆಯಲ್ಲಿ ಸೆಪ್ಟೆಂಬರ್ 2016 ರಿಂದ ಜುಲೈ 2017 ರವರೆಗೆ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿನಾಂಕ 18.10.2023 ರಂದು ನಾನು ಸಾಗರ ಸರ್ಕಾರಿ ಆಸ್ಪತ್ರೆಯಿಂದ ಬಂದ ಎಂ.ಎಲ್.ಸಿಯನ್ನು ಸ್ವೀಕರಿಸಿ, ಚಿಕಿತ್ಸೆ ಪಡೆಯುತ್ತಿದ್ದ ಚಾ.ಸಾ 1 ರವರ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ವಾಪಸ್ಸಾಗಿ ಠಾಣಾ ಅಪರಾಧ ನಂಬರ್ 209/2023 ರಂತೆ ಪ್ರಕರಣವನ್ನು ನೊಂದಾಯಿಸಿಕೊಂಡು ಪ್ರ.ವ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ.

**3.** ದಿನಾಂಕ 19.10.2023 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾ.ಸಾ 5 ಮತ್ತು 6 ರವರ ಸಮಕ್ಷಮ ನಿಪಿ–2 ರಂತೆ ಪಂಚನಾಮೆ ಮಾಡಿ, ನಿಪಿ–3 ರಂತೆ ನಕ್ಷೆ ತಯಾರಿಸಿ, ನಿಪಿ–4 ಮತ್ತು 5 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಆರೋಪಿತನು ಕೃತ್ಯಕ್ಕೆ ಬಳಸಿದ ಎಂ.ಒ–1 ರ ಕೋಲನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ಸಾಗಿ ಅಮಾನತ್ತು ಪಡಿಸಿಕೊಂಡ ಕೋಲನ್ನು ನಮ್ಮ ಠಾಣಾ ಮಾಲು ಪಟ್ಟಿ ಸ್ವತ್ತಿನಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

**4.** ದಿನಾಂಕ 11.10.2023 ರಂದು ಆರೋಪಿತನು ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದು ನನ್ನ ಸಮಕ್ಷಮ ಹಾಜರಾಗಿದ್ದು, ಅವನ ಮೇಲೆ ದಸ್ತಗಿರಿ ಕ್ರಮವನ್ನು ಅನುಸರಿಸಿ ನ್ಯಾಯಾಲಯದ ಆದೇಶದ ಪ್ರಕಾರ ಅವನನ್ನು ಬಿಡುಗಡೆ ಮಾಡಿರುತ್ತೇನೆ. ದಿನಾಂಕ 30.10.2023 ರಂದು ಸಾಗರದ ಸರ್ಕಾರಿ ಆಸ್ಪತ್ರೆಯಿಂದ ಚಾ.ಸಾ 1 ಮತ್ತು 2 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಉಳ್ಳೂರು ಗ್ರಾಮ ಪಂಚಾಯತಿಯಿಂದ ಘಟನಾ ಸ್ಥಳದ ದಾಖಲೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾ.ಸಾ 1 ರವರ ಹೇಳಿಕೆಯನ್ನು ನ್ಯಾಯಾಧೀಶರ ಮೂಲಕ ದಾಖಲು ಮಾಡಿಸಿರುತ್ತೇನೆ. ಭಾವಚಿತ್ರಗಳಿಗೆ ಸಂಬಂಧಪಟ್ಟಂತೆ ಭಾರತೀಯ ಸಾಕ್ಷ್ಯಾ ಅಧಿನಿಯಮ 65(ಬಿ) ಅಡಿಯಲ್ಲಿ ಒಂದು ಪ್ರಮಾಣ ಪತ್ರವನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡು ಬಂದಿದ್ದರಿಂದ ಆತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**5.** ಸಾಕ್ಷಿಯು ಆರೋಪಿತನನ್ನು ಮತ್ತು ಮು.ಮಾಲು-1 ಅನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-1 ರಿಂದ 3, 7 ರಿಂದ 9 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-1(ಬಿ), ನಿಪಿ-2(ಸಿ), ನಿಪಿ-3(ಸಿ), ನಿಪಿ-7(ಬಿ), ನಿಪಿ-8(ಬಿ) ಮತ್ತು ನಿಪಿ-9(ಬಿ) ಎಂದು, ಪ್ರ.ವ.ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಪಂಚಾಯತಿ ಪತ್ರ ಹಾಗೂ ದಾಖಲೆಯನ್ನು ಒಟ್ಟಾಗಿ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ಸಿಡಿಯನ್ನು ನಿಪಿ-12 ಎಂದು, ಭಾರತೀಯ ಸಾಕ್ಷ್ಯಾ ಅಧಿನಿಯಮ 65(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಆರ್.ಎಸ್ ರವರಿಂದಃ-**

**1.** 17.10.2023 ರಂದು ನಾನು ಠಾಣೆಯಲ್ಲಿ ಏನು ಕೆಲಸ ಮಾಡುತ್ತಿದ್ದೆ ಎಂದು ಈಗ ನನಗೆ ನೆನಿಪಿಲ್ಲ. ಆ ದಿನ ಎಸ್ ಹೆಚ್ ಒ ಎಂದು ಯಾರು ಕೆಲಸ ಮಾಡುತ್ತಿದ್ದರು ಎಂದು ಈಗ ನನಗೆ ನೆನಪಿಲ್ಲ. ದಿನಾಂಕ 17.10.2023 ರಂದು ನಾನು ಆಸ್ಪತ್ರೆಗೆ ಹೋಗಿಲ್ಲ. ನಾನು ಆಸ್ಪತ್ರೆಗೆ ಹೋದಾಗ ಚಾ.ಸಾ 2 ರವರ ಹೇಳಿಕೆಯನ್ನು ನಾನು ಪಡೆದುಕೊಂಡಿಲ್ಲ. ಚಾ.ಸಾ 1 ರವರು ಹೇಳಿಕೆ ನೀಡುವಾಗ ಚಾ.ಸಾ 2 ರವರು ಚಾ.ಸಾ 1 ರವರೊಂದಿಗೆ ಇರಲಿಲ್ಲ. ನಿಪಿ-1 ಅನ್ನು ಘಟನೆ ಮನೆಯ ಯಾವ

ಭಾಗದಲ್ಲಿ ನಡೆಯಿತು ಎಂದು ಬರೆದಿಲ್ಲ ಎಂದರೆ ಸರಿ. ಘಟನಾ ಸ್ಥಳದ ಅಕ್ಕ ಪಕ್ಕದಲ್ಲಿ 100 ಮೀ. ನ ವ್ಯಾಪ್ತಿಯಲ್ಲಿ ಯಾವುದೇ ಮನೆಗಳು ಇಲ್ಲ. ಚಾ.ಸಾ 5 ಮತ್ತು 6 ರವರು ಚಾ.ಸಾ 1 ರವರ ಸಂಬಂಧಿಕರೆಂದರೆ ಸರಿಯಲ್ಲ.

**2.** ಘಟನಾ ಸ್ಥಳಕ್ಕೆ ನಾನು ಹೋದಾಗ ಬೆಳಿಗ್ಗೆ 09.30 ಗಂಟೆಯಾಗಿತ್ತು. ನಾನು ಹೋದ ನಂತರ ಪಂಚರನ್ನು ಹಾಜರುಪಡಿಸಿಕೊಂಡೆವು. ಚಾ.ಸಾ 2 ರವರು ನಿಪಿ-2 ರ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ. ನಿಪಿ-3 ರಲ್ಲಿ ಕೃತ್ಯ ನಡೆದ ಸ್ಥಳದ ಹೆಸರನ್ನು ನಿಖರವಾಗಿ ಬರೆದಿಲ್ಲ ಎಂದರೆ ಸರಿ. ನಿಪಿ-3 ರ ನಕ್ಷೆಯಲ್ಲಿ ಮನೆಯ ಅಳತೆಯನ್ನು ಅಂದಾಜಿನ ಮೇಲೆ ನಮೂದು ಮಾಡಿದ್ದೇನೆ. ಎಂ.ಒ-1 ರ ಕೋಲನ್ನು ನಾನು ಸ್ಥಳದಲ್ಲಿ ಅಳತೆ ಮಾಡಿಲ್ಲ. ಅಂದಾಜಿನ ಮೇಲೆ ಕೋಲಿನ ಅಳತೆಯನ್ನು ಬರೆದಿದ್ದೇನೆ. ಎಂ.ಒ-1 ರ ಕೋಲನ್ನು ಚಾ.ಸಾ 1 ರವರು ಹಾಜರು ಪಡಿಸಿದರು. ಪಂಚನಾಮೆಯನ್ನು ಘಟನಾ ಸ್ಥಳದಲ್ಲಿಯೇ ಬರೆಯಲಾಯಿತು. ಬೆಳಿಗ್ಗೆ 11.30 ಸುಮಾರಿಗೆ ಪಂಚನಾಮೆ ಸಾಕ್ಷಿದಾರರು ಸಹಿ ಮಾಡಿದರು. ಪಂಚನಾಮೆ ಮಾಡಿದಾಗ ಚಾ.ಸಾ 2 ರವರ ತಾಯಿ ಸ್ಥಳದಲ್ಲಿ ಇದ್ದರು. ಬೆಳಿಗ್ಗೆ 10.00-11.00 ಗಂಟೆಯವರೆಗೆ ಪಂಚನಾಮೆ ಕ್ರಮ ಮಾಡಲಾಯಿತು. ಪಂಚನಾಮೆ ಮಾಡಿದ ನಂತರ ಚಾ.ಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದಿದ್ದೇನೆ. ನಿಪಿ-2 ಮತ್ತು 3 ರ ವಿದ್ಯಾಮಾನಗಳು ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳವು ಯಾರಿಗೆ ಮಾಡಿದ್ದು ಎಂದು ನಾನು ವಿಚಾರಣೆ ಮಾಡಿದ್ದೇನೆ. ಚಾ.ಸಾ 2 ರವರಿಂದ ಪಂಚನಾಮೆ ಸಂದರ್ಭದಲ್ಲಿ ಘಟನೆಯಲ್ಲಿ ಹರಿದ ಅಂಗಿ ಮತ್ತು ಬನಿಯನ್ ಅನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಚಾ.ಸಾ 4 ರವರು ಘಟನಾ ಸ್ಥಳದ ಕೇರಿಯ ವಾಸಿಯಾಗಿದ್ದು, ಘಟನಾ ಸ್ಥಳದ ಪಕ್ಕದ ಮನೆಯ ವಾಸಿಯಾಗಿರುವುದಿಲ್ಲ. ಚಾ.ಸಾ 1 ರವರು ಈ ಘಟನೆ ಅವರ ಮನೆಯ ಅಡುಗೆ ಕೋಣೆಯಲ್ಲಿ ನಡೆಯಿತು ಎಂದು ಅವರು ನನಗೆ ಹೇಳಿಲ್ಲ. ಪಂಚರ ಸಮಕ್ಷಮ ಪಂಚನಾಮೆ ಮಾಡಿ ಎಂ.ಒ-1 ಅನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 17.10.2023 ರಂದು ಯಾವುದೇ ಘಟನೆ ನಡೆದಿಲ್ಲ ಮತ್ತು ಆರೋಪಿತನು ಚಾ.ಸಾ 1 ರವರಿಗೆ ಹಲ್ಲೆ ಮಾಡಿ, ಅವಾಚ್ಯವಾಗಿ ಬೈಯ್ದು ಬೆದರಿಕೆ ಹಾಕಿಲ್ಲ ಮತ್ತು ಚಾ.ಸಾ 1 ರವರಿಗೆ ಅವಮಾನ ಮಾಡಿಲ್ಲ ಎಂದರೆ ಸರಿಯಲ್ಲ. ಎಂ.ಒ-1 ಕ್ಕೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾ.ಸಾ 1 ರವರು ನನಗೆ

ಪರಿಚಯಸ್ಥರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಪ್ರಕರಣವನ್ನು ಸರಿಯಾಗಿ ತನಿಖೆ ಮಾಡದೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.